– ಕರ್ನಾಟಕ ಸರ್ಕಾರದ ನಡವಳಿ –

ವಿಷಯ: ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ-ಅಂತಿಮ ಆದೇಶ ಹೊರಡಿಸುವ ಬಗ್ಗೆ-ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/167/ಗ್ರಾಪಂಕಾ/2009 ದಿನಾಂಕ:27.10.2009.
2. ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-INQ/14-A/9/2010/ARE-3 Dt:30.08.2016.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ARE-3/ENQ-9/2010, Dt:17.07.2017.
4. ಸರ್ಕಾರದ ಪರಿಷ್ಕೃತ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/568/ಗ್ರಾಪಂಕಾ/2016 ದಿನಾಂಕ:04.08.2017.
5. ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ಇವರು ಸರ್ಕಾರದ ಪರಿಷ್ಕೃತ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:04.09.2017.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಅಪರ ನಿಬಂಧಕರು ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ"

The charge alleged against the DGO was that, while he was working as village Panchayath, Tumbe, Bantwal Taluk, Dakshina Kannada District, yielding to the pressure of one Rajeshekhar Rai, the brother of former Minister (Present Minister) Shri Ramanth Rai, filed a false complainant (before this Institution), despite of the fact that, the road was formed by the complainant in this which is a private land. Further, in respect of the very same subject matter, a suit was pending in O.S No.138/2002. Thereby, the DGO failed to maintain absolute integrity, devotion to duty and rendered himself as unbecoming of a Government servant and committed misconduct within the meaning of Rule 3(1)(i) to (iii) of Karnataka Civil Service (Conduct) Rules, 1966.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ವಿಚಾರಣಾಧಿಕಾರಿಯವರ ವರದಿಯನ್ನು ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಪೂವಪ್ಪ ಶೆಟ್ಟಿ, ರವರು ಕಾರ್ಯದರ್ಶಿಯಾಗಿ ತುಂಬೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ, ಶ್ರೀ ವಾಲ್ಟರ್ ಮೋಂತೆರೋ, ಕಳ್ಳಿಗೆ ಪೋಸ್ಟ್, ಬಂಟ್ವಾಳ ತಾಲ್ಲೂಕುರವರು ಸರ್ವೆ ನಂ.147/203 ಮತ್ತು ಸರ್ವೆ ನಂ.153/154/14/13 ಜಮೀನಿನಲ್ಲಿ ಸ್ವಂತ

ಉಪಯೋಗಕ್ಕಾಗಿ ರಸ್ತೆ ನಿರ್ಮಿಸಿಕೊಂಡಿದ್ದು, ರಸ್ತೆಗೆ ಹಾಕಲಾಗಿರುವ ಗೇಟನ್ನು ಕಾನೂನುಬಾಹಿರವಾಗಿ ಕಿತ್ತುಹಾಕಿ ಅನುಚಿತವಾಗಿ ವರ್ತಿಸಿ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದು ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii)ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಯನ್ನು ಮೂರು ವರ್ಷಗಳ ಅವಧಿಗೆ ಸಂಚಿತ ರಹಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಈ ಸಂಬಂಧ ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ, ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಸದರಿ ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಸದರಿಯವರು 2001 ರ ಜೂನ್ ತಿಂಗಳಲ್ಲಿ ತುಂಬೆ ಗ್ರಾಮ ಪಂಚಾಯಿತಿಗೆ ಪ್ರಭಾರ ಕಾರ್ಯದರ್ಶಿಯಾಗಿ ನಿಯುಕ್ತಿಗೊಂಡಿದ್ದು, ಕರೋಪಾಡಿ ಗ್ರಾಮ ಪಂಚಾಯಿತಿಯ ಪೂರ್ಣವಧಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾಗಿ ಸದರಿ ಗ್ರಾಮ ಪಂಚಾಯಿತಿಗೆ ಸೇರುವ ಮೊದಲೇ ಪಚ್ಚಿನಡ್ಕ ಪನ್ನಡ್ಕ ರಸ್ತೆಯನ್ನು ಗ್ರಾಮ ಪಂಚಾಯಿತಿ ರಸ್ತೆಯಾಗಿ ದಾಖಲಿಸಲು ನಿರ್ಣಯ ಕೈಗೊಂಡಿದ್ದು, ಸದರಿ ರಸ್ತೆಯು ಸಾಧಾರಣ 2.5 ಕಿ. ಮೀ ಉದ್ದದ ಸಾರ್ವಜನಿಕ ರಸ್ತೆಯಾಗಿದ್ದು, ವಾಲ್ಟರ್ ಮೋಂತೆರೋ ಹೇಳಿರುವಂತೆ 1 ಕಿ.ಮೀ ಉದ್ದದ ರಸ್ತೆಯಲ್ಲವೆಂದು ತಿಳಿಸಿರುತ್ತಾರೆ.

ಸದರಿ ರಸ್ತೆಯ ಬಗ್ಗೆ ದಿನಾಂಕ:13.07.2001 ಹಾಗೂ 27.08.2001 ರಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರೋಹಿಣಿಯವರ ಅಧ್ಯಕ್ಷತೆಯಲ್ಲಿ ಆರ್‌ಟಿಸಿಯಲ್ಲಿ ದಾಖಲಿಸಲು ಹಾಗೂ ದುರಸ್ತಿ ಪಡಿಸಲು ಸರ್ವಾನುಮತದ ನಿರ್ಣಯಗಳನ್ನು ಕೈಗೊಳ್ಳಲಾಗಿದೆಂದು, ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಬರೆಯಲಾಗಿದೆಂದು, ದಿನಾಂಕ:25.11.2002 ರಂದು ಕಳ್ಳಿಗೆ ಗ್ರಾಮದ ರೊನಾಲ್ಡ್ ರೋಡ್ರಿಗಸ್ ರವರು ಸದರಿ ರಸ್ತೆಯ ಮಹಾಬಲ ಪೂಜಾರಿ ಮತ್ತು ಅವರ ಸಹೋದರರು ಹಾಗೂ ವಾಲ್ಟರ್ ಮೊಂತೇರೋ ರವರು ರಸ್ತೆಯ 2 ಕಡೆ ಹೊಂಡ ತೋಡಿ, ಒಂದು ಕಡೆ ಮುಳ್ಳು ತಂತಿಯ ಬೇಲಿ ನಿರ್ಮಿಸಿ, ಮೇಲಿನ ರಸ್ತೆಗೆ ತಡೆ ಉಂಟುಮಾಡಿರುತ್ತಾರೆಂದು ದೂರು ಅರ್ಜಿ ಸಲ್ಲಿಸಿದ್ದು, ತಡೆಯನ್ನು ತೆರವುಗೊಳಿಸಲು ವಿನಂತಿಸಿದ್ದು, ಈ ಬಗ್ಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು/ಉಪಾಧ್ಯಕ್ಷರು ಸದಸ್ಯರಲ್ಲಿ ಚರ್ಚಿಸಿದಾಗ ಗ್ರಾಮ ಪಂಚಾಯಿತಿನ ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಸದರಿ ರಸ್ತೆಯ ತಡೆಯನ್ನು ತೆರವುಗೊಳಿಸುವ ಬಗ್ಗೆ ತನಗೆ ಅಧಿಕಾರ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

ಈ ಬಗ್ಗೆ ಸದರಿಯವರು ದಿನಾಂಕ:28.11.2012 ರಂದು ಬಂಟ್ವಾಳದ ಆರಕ್ಷಕ ಠಾಣೆಗೆ ದೂರು ಸಲ್ಲಿಸಿದ್ದು, ಅದೇ ದಿನ ಸಾಯಂಕಾಲ ಆರಕ್ಷಕ ಠಾಣೆಯ ಅಧಿಕಾರಿಗಳು ಹಾಗೂ ವೃತ್ತ ನಿರೀಕ್ಷಕರು ಸದರಿ ತಡೆಯನ್ನು ತೆರವುಗೊಳಿಸುವಾಗ ವಾಲ್ಟರ್ ಮೊಂತೇರೋ ಕರ್ತವ್ಯಕ್ಕೆ ಅಡ್ಡಿಪಡಿಸಿದಾಗ ಅವರನ್ನು ಬಂಧಿಸಿರುತ್ತಾರೆ. ಸದರಿ ಸ್ಥಳದ ಮಾಲೀಕರಾದ ಮಹಾಬಲ ಪೂಜಾರಿ ಹಾಗೂ ಕಲ್ಯಾಣಿ ಇವರು ನಮ್ಮ ಮೇಲೆ ಲೋಕಾಯುಕ್ತಕ್ಕೆ ಯಾವುದೇ ದೂರು ಸಲ್ಲಿಸಿರುವುದಿಲ್ಲ. ಜಾಗಕ್ಕೆ ಸಂಬಂಧಿಸಿದ ವ್ಯಕ್ತಿಯಾದ ವಾಲ್ಟರ್ ಮೊಂತೇರೋ ಇವರು ನಾವು ವರ್ಗ ಸ್ಥಳಕ್ಕೆ ಅಕ್ರಮ ಪ್ರವೇಶಿಸಿ ಗೇಟನ್ನು ನಾಶ ಮಾಡಿದ್ದೇವೆ ಎಂದು ಹೇಳುತ್ತಿರುವುದು, ಆ ಜಾಗದಲ್ಲಿ ಹೊಂಡ ಮಾಡಿ, ಮುಳ್ಳು ತಂತಿ ಹಾಕಿ, ರಸ್ತೆ ಬಂದ್ ಮಾಡಿದ್ದನ್ನು ತೆರವುಗೊಳಿಸಿದ್ದಾಗಿ, ವರ್ಗ ಜಾಗಕ್ಕೆ ಪ್ರವೇಶ ಮಾಡಿ ಗೇಟ್ ಅಥವಾ ಮಾಡಿ ಗೇಟ್ ಅಥವಾ ಯಾವುದೇ ಸಾಮಾಗ್ರಿ ನಾಶ ಮಾಡಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ರಸ್ತೆಯ ಬಗ್ಗೆ ದಿನಾಂಕ:16.10.2001 ರಂದು ಬಂಟ್ವಾಳ ವೃತ್ತ ನಿರೀಕ್ಷಕರ ಸಮ್ಮುಖದಲ್ಲಿ ಒಪ್ಪಂದವಾಗಿದೆಂದು, ಸದರಿ ರಸ್ತೆಯ ಬಗ್ಗೆ ದಿನಾಂಕ:09.01.2003 ರಂದು ಮಂಗಳೂರು ಲೋಕಾಯುಕ್ತ ತನಿಖಾಧಿಕಾರಿಗಳು ಸದರಿಯವರನ್ನು ಕರೆಸಿಕೊಂಡು, ಸದರಿಯವರನ್ನು ಬೆದರಿಸಿ, ಹೆದರಿಸಿ ಬಲತ್ಕಾರದಿಂದ ಸಹಿ ತೆಗೆದುಕೊಂಡಿದ್ದಾಗಿ, ತನಿಖಾಧಿಕಾರಿಗಳ ವರದಿಯನ್ನು ಪರಿಗಣಿಸದೆ ವಾಸ್ತವ ಸ್ಥಿತಿಯನ್ನು ಪರಾಂಬರಿಸಿ ತೀರ್ಪು ನೀಡಬೇಕೆಂದು ಸರ್ಕಾರಿ ಜಾಗದಲ್ಲಿ 90% ಹಾದು ಹೋಗುವ ಸದರಿ ರಸ್ತೆಯು ಕೇವಲ ಸ್ವಲ್ಪ ಭಾಗ ಮಾತ್ರ ವರ್ಗ ಜಾಗದಲ್ಲಿ ಹಾದು ಹೋಗುತ್ತಿದ್ದು, ಸದರಿಯವರು ಸಾರ್ವಜನಿಕ ಹಿತದೃಷ್ಟಿಯಿಂದ ಗ್ರಾಮ ಪಂಚಾಯಿತಿಯ

ಅಧಿಕಾರಿಯಾಗಿ ಗ್ರಾಮ ಪಂಚಾಯಿತಿಯ ನಿರ್ಣಯದಂತೆ ಕರ್ತವ್ಯ ನಿರ್ವಹಿಸಿದ್ದು, ಯಾವುದೇ ಅಧಿಕಾರ ದುರುಪಯೋಗ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ಆಪಾದಿತರ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು, ಸದರಿಯವರ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ, ಕಾರಣ ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಯವರು ತಮ್ಮ ನಿರ್ಣಯ ಹಾಗೂ ವರದಿಯನ್ನು ದಾಖಲಿಸಿದ್ದು ಅದರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

On going through this documents, which is marked as Ex-P5, it is noticed that the DGO having prepared this complaint in the name of Smt. Rohini on 16.12.2002, gave this complaint to the brother of Smt. Rahini asking him to obtain the signature of his sister- Rohini and to return it to him DGO so that he can file this complaint to the Police station on behalf of Smt. Rohini. In the said complaint allegations are made against the present complainant that, he has forcibly tried to obtain the signature of Smt. Rohini and threatened her with the help of gunda elements. This document though produced in the enquiry, is not disputed on behalf of the DGO since he remained exparte. Therefore, I have no hesitation to place reliance on this document in order to come to a conclusion that the DGO had made attempt to tried to got file a false complaint against the complainant in the name of Smt. Rohini, the then President of Tumbe Grama Panchayath.

Having regard to the facts of the present enquiry and considering the unchallenged testimony of the complainant and also documents marked in the enquiry, I have no hesitation to hold that, the DGO yielding to the pressure of Rajashekara Rai-the then Vice President of Tumbe Grama Panchayath, filled a false complaint against the complainant on 28.11.2002. It is also established during enquiry that, despite pendency of the suit in O.S. 138/2002 in respect of a private mud road formed by the complainant in sy. No. 154, with the permission of the land owner Mahabala Poojari, and despite knowing the fact that, the complainant has put up a gate in order to restrict the movement of others through that mud road formed in sy. No. 154, the DGO by misusing his office as Secretary of Tumbe Grama Panchayath and yielding to the pressure of Mr. Jeffry Rodrigus and Rajashekar Rai, destroyed the said gate, thereby, exceeded his powers, thereby, misused his office, thereby acted in manner unbecoming of a Government servant.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

In view of the findings of the Inquiry Officer, it is hereby recommended to the Government that the DGO-Shri Poovappashetty, Secretary, Village Panchayath, Tumbe, Bantwal Taluk, Dakshina Kannada District, be punished with "withholding of three annual increments for a period of three years without cumulative effect" in exercise of powers under Rule 8(iii) of the Karnataka civil Service ( Classification, Control and Appeal ) Rules, 1957.

ಸರ್ಕಾರವು ಸದರಿ ಪ್ರಕರಣದಲ್ಲಿ ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಇವರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರ ಶಿಫಾರಸ್ಸು ಹಾಗೂ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ

ಪರಿಶೀಲಿಸಿ, ಸದರಿ ಆಪಾದಿತರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುವುದರಿಂದ, ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ 8(iii) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಯನ್ನು ಮೂರು ವರ್ಷಗಳ ಅವಧಿಗೆ ಸಂಚಿತ ರಹಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:568:ಗ್ರಾಪಂಕಾ2016,**
**ಬೆಂಗಳೂರು, ದಿನಾಂಕ-20-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಪೂವಪ್ಪ ಶೆಟ್ಟಿ, ರವರು ಕಾರ್ಯದರ್ಶಿಯಾಗಿ ತುಂಬೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ, ಶ್ರೀ ವಾಲ್ಟರ್ ಮೋಂತೆರೋ, ಕಳ್ಳಿಗೆ ಪೋಸ್ಟ್, ಬಂಟ್ವಾಳ ತಾಲ್ಲೂಕುರವರು ಸರ್ವೆ ನಂ.147/203 ಮತ್ತು ಸರ್ವೆ ನಂ.153/154/14/13 ಜಮೀನಿನಲ್ಲಿ ಸ್ವಂತ ಉಪಯೋಗಕ್ಕಾಗಿ ರಸ್ತೆ ನಿರ್ಮಿಸಿಕೊಂಡಿದ್ದು, ರಸ್ತೆಗೆ ಹಾಕಲಾಗಿರುವ ಗೇಟನ್ನು ಕಾನೂನುಬಾಹಿರವಾಗಿ ಕಿತ್ತುಹಾಕಿ ಅನುಚಿತವಾಗಿ ವರ್ತಿಸಿ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದು ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii)ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಯನ್ನು ಮೂರು ವರ್ಷಗಳ ಅವಧಿಗೆ ಸಂಚಿತ ರಹಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/1/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
6. ಶ್ರೀ ಪೂವಪ್ಪ ಶೆಟ್ಟಿ, ಕಾರ್ಯದರ್ಶಿ, ತುಂಬೆ ಗ್ರಾಮ ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.